'ಹಾಗಲ್ಲ ಅಪ್ಪಾ. ಅಪಾರ್ಟ್‌ಮೆಂಟಿನಲ್ಲಾದ್ರೆ ಮಕ್ಕಳಿಗೆ ಬೇಕಾದಷ್ಟು ಜನ ಫ್ರೆಂಡ್ಸ್ ಸಿಕ್ತಾರೆ. ಎಲ್ಲರ ಜೊತೆ ಬೆರೆತು ಬದುಕೋದು ಅಭ್ಯಾಸ ಆಗುತ್ತೆ. ಎಲ್ಲಾ ಅನುಕೂಲತೇನೂ ಒಂದೇ ಕಡೇಲಿರುತ್ತೆ. ಸ್ವಿಮಿಂಗ್ ಪೂಲು, ವಾಕಿಂಗಿಗೆ ಪಾರ್ಕು, ಮಕ್ಕಳ ಸ್ಕೂಲಿಗೆ ಬಸ್ಸು ಯಾವುದಕ್ಕೂ ತೊಂದರೆ ಇರಲ್ಲ...'

'ನಿಂಗೆ ದುಡ್ಡು ಕುಣೀತಿದೆ ಅಂತ ಕಾಣುತ್ತೆ' ಕೊಂಚ ಅಸಹನೆ ಅಪ್ಪನಿಗೆ. ಮಕ್ಕಳ ಮೇಲೆ ಮುನಿಸಿಕೊಳ್ಳಲು ಅಪ್ಪನಿಗೆ ಹಕ್ಕಿಲ್ಲವೇ? ಒಳ್ಳೇ ಅಪ್ಪ ಅನ್ನಿಸಿ ನಗು ಬಂದಿತ್ತು ಸಂತೋಷನಿಗೆ. ದುಡ್ಡು ಕುಣಿಯುತ್ತಿರುವುದು ಹೌದೇ ಹೌದು. ಅದರ ಲೆಕ್ಕ ಗೊತ್ತಿಲ್ಲ ಅಪ್ಪನಿಗೆ. ಕೂಡಿಟ್ಟು ಶಾಖ ಕೊಡುವುದಕ್ಕಿಂತ ಅನುಭವಿಸುವ ಕಡೆ ವಾಲುವ ಮನಸ್ಸಿಗೆ, ವಯಸ್ಸಿಗೆ ವಾಸ್ತವಪ್ರಜ್ಞೆ ಕೂಡ ಬೆಂಬಲಕ್ಕೆ ನಿಂತಿತ್ತು. ತನ್ನ ಸಹೋದ್ಯೋಗಿಗಳು ಐಷಾರಾಮಿ ಫ್ಲ್ಯಾಟ್ ಖರೀದಿಸಿ, ಆಧುನಿಕ ಸೌಕರ್ಯಗಳಿಂದ ಸುಸಜ್ಜಿತಗೊಳಿಸಿ, ಮೇಲ್ದರ್ಜೆಯ ಜೀವನ ನಡೆಸುತ್ತಿರುವಾಗ ತಾವಿನ್ನೂ ಅದೇ ಹಳೆಯ ಮನೆಯಲ್ಲಿ ಬದುಕು ಕಟ್ಟಿಕೊಂಡಿದ್ದೇವೆ. ಎಂತದೇ ದುಬಾರಿ ಪೀಠೋಪಕರಣಗಳಿಂದ ಅಲಂಕರಿಸಿದರೂ ಮುದುಕಿಗೆ ಸಿಂಗಾರ ಮಾಡಿದಂತೆ ಕಾಣುತ್ತದೆಯೇ ವಿನಾ ಆಧುನಿಕತೆಗೆ ಹೊಂದಿಕೊಳ್ಳುವುದಿಲ್ಲ. ಬಾಲ್ಯದಿಂದ ಆಡಿ ನಲಿದು, ಓದಿ ಬರೆದು, ಈ ಮಟ್ಟದವರೆಗೆ ಬದುಕು ಕಟ್ಟಿಕೊಂಡ ಮನೆಯ ಕುರಿತು ಸಂತೋಷನ ಮನಸ್ಸಿನಲ್ಲಿ ಮಧುರಭಾವನೆಗಳ ಭಂಡಾರವೇ ಇದೆ. ಅಕ್ಕ ತವರಿಗೆ ಬಂದಾಗ ಕಳೆದು ಹೋದ ಕಾಲಮಾನವನ್ನು ನೆನೆದು ಇಬ್ಬರೂ ಮಾತಾಡಿಕೊಂಡು ಸಂಭ್ರಮಿಸುವುದಿದೆ. ಸಣ್ಣಪುಟ್ಟ ವಿಷಯಕ್ಕೆ ಇಬ್ಬರಿಗೂ ಎಷ್ಟು ಜಗಳವಾಗುತ್ತಿತ್ತು ಎಂದು ನೆನೆದು ಬಾಲ್ಯದ ದಿನಗಳ ಕುರಿತು ಕೌತುಕಪಡುವುದಿದೆ. ಅಕ್ಕನನ್ನು ಮದುವೆ ಮಾಡಿ ಕಳಿಸಿಕೊಟ್ಟಿದ್ದು ಇದೇ ಮನೆಯಿಂದ ಮತ್ತು ಅವಳ ಅಗಲಿಕೆಯ ಆರಂಭದ ದಿನಗಳಲ್ಲಿ ಈ ತಮ್ಮ ಯಾರಿಗೂ ಗೊತ್ತಾಗದಂತೆ ಕಣ್ಣೀರಿಳಿಸುತ್ತಿದ್ದುದು ಅವನ ಕೋಣೆಯ ಅವನ ದಿಂಬಿಗಷ್ಟೇ ಗೊತ್ತಿದ್ದ ಸತ್ಯ. ಸುಳ್ಳೋ, ನಿಜವೋ ಕೆಲಕೆಲವು ಮನೆಗಳ ಕುರಿತು ಕೆಲವೊಂದು ನಂಬಿಕೆಗಳು ಪ್ರಚಾರದಲ್ಲಿರುತ್ತವೆ.

'ಆ ಮನೆಯಲ್ಲಿದ್ದವರು ಉದ್ಧಾರವಾಗುವುದಿಲ್ಲ, ಎಷ್ಟೋ ವರ್ಷ ಮಕ್ಕಳಾಗದಿದ್ದವರು ಈ ಮನೆಗೆ ಬಂದರೆ ಮಕ್ಕಳಾಗುತ್ತವೆ' ಇಂಥದ್ದೇ ಕೆಲವೊಂದು ನಂಬಿಕೆಗಳು. 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಎನ್ನುವಂತಹ ಹೇಳಿಕೆಗಳು. ಹೇಳಿಕೆಗಳು ಸತ್ಯವೆನ್ನುವಂತೆ ಅವು ನಿಜವಾಗುತ್ತಿದ್ದ ಉದಾಹರಣೆಗಳೂ ಇರುತ್ತಿದ್ದುವು. ಅಥವಾ ಹೀಗೆ ನಿಜವಾಗುತ್ತಿದ್ದುದರಿಂದಲೇ ಹೇಳಿಕೆಗಳು ಚಲಾವಣೆಗೆ ಬರುತ್ತಿದ್ದುದೋ? ಏನೋ ಒಂದು. ಅಂತೂ ಈ ಮನೆ ಕಟ್ಟಿಸಿಕೊಂಡು ಬಂದ ಮೇಲೆ ಯಾವುದರಲ್ಲೂ ಅರಕೆಯಾಗಿದ್ದು ಇಲ್ಲವೇ ಇಲ್ಲ ಎಂದು ಅಮ್ಮನ ಅಂಬೋಣ. ಫ್ಯಾಕ್ಟರಿಯೊಂದರಲ್ಲಿ ಕಾರಕೂನಿಕೆ ಮಾಡುತ್ತಿದ್ದ ಅಪ್ಪ ಹಂತಹಂತವಾಗಿ ಮೇಲ್ದರ್ಜೆಗೇರಿದರು. ಮಕ್ಕಳು ಯಾವುದರಲ್ಲೂ ಹಿಂದುಳಿಯದೆ ಜಾಣರಾಗಿ ಓದಿದರು. ಮಗಳಿಗೆ ಯೋಗ್ಯ ಸಂಬಂಧ ದೊರೆತು ಮದುವೆಯಾಗಿ ಸುಖವಾಗಿದ್ದಾಳೆ. ಮಗ ಹೆತ್ತವರು ಹೆಮ್ಮೆಪಡುವಂತೆ ಓದಿ ಎಂಜಿನಿಯರಾಗಿ ಒಳ್ಳೆಯ ಉದ್ಯೋಗ ದೊರಕಿಸಿಕೊಂಡ. ಅವನ ಮದುವೆಯಾಗಿ, ಮೊಮ್ಮಕ್ಕಳು ಹುಟ್ಟಿ, ಹೀಗೆ ಸಂತೋಷನ ಅಮ್ಮನ ಬಳಿ ಎಷ್ಟುದ್ದಕ್ಕೂ ಬೆಳೆಯುವ ಪಟ್ಟಿ ಇದೆ. ಸೊಸೆ ವಿದ್ಯಾವಂತೆಯಾದರೂ, ಇದ್ದುಳ್ಳವರ ಮನೆಯಿಂದ ಬಂದವಳಾದರೂ, ಅತ್ತೆ ಮನೆಗೆ ಹೊಂದಿಕೊಂಡಿದ್ದಾಳೆ. ಈ ಕಾಲದಲ್ಲಿ ಇಂತವರು ಎಷ್ಟು ಜನ ಸಿಗುತ್ತಾರೆ?

ಮದುವೆಯಾಗುತ್ತಿದ್ದಂತೆ ಗಂಡನ ಕಿವಿ ಕಚ್ಚಿ ಬೇರೆ ಸಂಸಾರ ಹೂಡುವವರೇ ಹೆಚ್ಚು. ಅದರಲ್ಲೂ ಗಂಡ ಕೈತುಂಬಾ ದುಡಿಯುವವನಾದರೆ ಹೆಂಡತಿಯಾದವಳಿಗೆ ಕೋಡು. ಅವನ ದುಡಿಮೆಗೆ ತಾನೇ ಹಕ್ಕುಗಾರ್ತಿ ಎನ್ನುವ ಹಮ್ಮು. ತಮ್ಮ ಮನೆ ಇದಕ್ಕೆ ಅಪವಾದ ಎಂದು ಸಂತೋಷನ ಅಮ್ಮ ಬೀಗುತ್ತಿದ್ದರೆ ಅದರಲ್ಲಿ ಅಸಹಜವಾದದ್ದೇನಿರಲಿಲ್ಲ. 'ದೇವರೇ, ಈ ಸುಖಕ್ಕೆ ಯಾರ ದೃಷ್ಟಿಯೂ ಬೀಳದಿರಲಿ' ಎಂದು ದೇವರಲ್ಲಿ ಅವಳ ಪ್ರಾರ್ಥನೆ. ಹೀಗೆ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿದ್ದ ಸುಖ ಸಂಸಾರದಲ್ಲಿ, ಮದುವೆಯಾಗಿ ಹತ್ತು ವರ್ಷಗಳ ನಂತರ ಮಗ ಮತ್ತೊಂದು ಮನೆ ಖರೀದಿಸುವ ಕುರಿತು ಮಾತಾಡುತ್ತಿದ್ದಾನೆ. ಆಯ್ತು, ಎಲ್ಲೋ ಒಂದು ಕಡೆ ಬಂಡವಾಳ ಹೂಡುತ್ತಾನೆ. ಅದರಲ್ಲಿ ತಪ್ಪೇನಿಲ್ಲ ಅಂದುಕೊಂಡರೆ ಹಾಗೇನಲ್ಲ. ತಳ ಕಿತ್ತು ಅಲ್ಲಿಗೇ ಹೋಗಿ ನೆಲೆಸುವ ಯೋಚನೆ.

'ನಾಲ್ಕು ಬೆಡ್ ರೂಮುಗಳ ಮನೆ ಅಪ್ಪಾ. ಎಲ್ಲರಿಗೂ ಒಂದೊಂದು ಪ್ರತ್ಯೇಕದ ರೂಮು...' ಅನ್ನುತ್ತಾನೆ.

'ಮನೆ ದೊಡ್ಡದಾದಷ್ಟೂ ಒಡನಾಟ ಕಮ್ಮಿಯಾಗುತ್ತೆ ಕಣೋ. ಎಲ್ರೂ ಅವರವರ ಕೋಣೆ ಹೊಕ್ಕಂಬಿಟ್ರೆ ಮುಗೀತು'.

'ಮಕ್ಕಳು ಬೆಳೀತಾ ಹೋದ ಹಾಗೆ ಪ್ರತ್ಯೇಕದ ರೂಮು ಬೇಕಲ್ವಾ ಅಪ್ಪ?'

'ಇದೊಳ್ಳೇ ಕತೆ. ನೀನೂ ನಿನ್ನಕ್ಕ ಒಂದೇ ರೂಮಲ್ಲಿ ಓದ್ತಿರಲಿಲ್ವಾ?'

ಹಳೆಯ ದಿನಗಳ ನೆನವರಿಕೆಯಿಂದ ಸಂತೋಷನ ಮನಸ್ಸು ಮೃದುವಾಗಿತ್ತು. ಸಣ್ಣವನಿದ್ದಾಗ ಇವನಿಗೆ ಗಟ್ಟಿಯಾಗಿ ಓದಿಕೊಳ್ಳುವ ಅಭ್ಯಾಸ. ಅವಳು ಮನಸ್ಸಿನಲ್ಲೇ ಮನನ ಮಾಡಿಕೊಳ್ಳುವವಳು. ಕೋಣೆಯ ಒಂದು ಮಗ್ಗುಲಲ್ಲಿ ಇವನು, ಇನ್ನೊಂದು ಮಗ್ಗುಲಲ್ಲಿ ಅವಳು. ಇಬ್ಬರಿಗೂ ಮಂಚ ಗಿಂಚ ಏನಿಲ್ಲ. ನೆಲದ ಮೇಲೇ ಲೇಪು ಬಿಚ್ಚಿ ಮಲಗುವ ಅಭ್ಯಾಸ. ಬೆಳಿಗ್ಗೆ ಎದ್ದ ಮೇಲೆ ಅಲ್ಲೇ ಸುರುಳಿ ಸುತ್ತಿ ಗೋಡೆಗೊರಗಿಸಿಬಿಟ್ಟರೆ ಮುಗಿಯಿತು. ಇವನು ಏನನ್ನೋ ಗಟ್ಟು ಮಾಡಿಕೊಳ್ಳಲು ದನಿ ಏರಿಸಿದರೆ ಅವಳು ಸಿಡುಕುತ್ತಿದ್ದಳು. ಅವಳು ಸಿಡುಕಿದಷ್ಟೂ ಇವನಿಗೆ ಆವೇಶ ಏರುತ್ತಿತ್ತು. ದನಿಯೂ. ಹಾಗೆ ಅಪ್ಪ, ಅಮ್ಮನ ಕೋಣೆ ಇತ್ತು. ಅವರು ಮಲಗುವವರೆಗೆ ಅಲ್ಲಿ ಕೂತು ಒಬ್ಬರು ಓದಿಕೊಳ್ಳಬಹುದಿತ್ತು. ಆದರೆ ಜಗಳ, ಕದನ, ಪೈಪೋಟಿಗಳ ನಡುವೆ ನಡೆಯುವ ಓದಿನ ಸೊಗಸು ಅದರಲ್ಲಿ ಸಿಗುತ್ತಿತ್ತೇ? ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಜೊತೆಗಿದ್ದರಷ್ಟೇ ಸಮಾಧಾನ. ದೊಡ್ಡವನಾಗುತ್ತಿದ್ದ ಹಾಗೆ ಇವನೂ ಅಕ್ಕನ ಹಾಗೆ ಮನಸ್ಸಲ್ಲೇ ಓದಿಕೊಳ್ಳುವುದನ್ನು ರೂಢಿಸಿಕೊಂಡ. ಹಿರಿಯಕ್ಕನ ಚಾಳಿಗೆ ಒಗ್ಗಿಕೊಂಡ. ಇಬ್ಬರೂ ಗಣಿತದ ಲೆಕ್ಕಗಳನ್ನು ಬಿಡಿಸುತ್ತಿದ್ದದು ಕೋಣೆಯ ಕೆಂಪು ಸಿಮೆಂಟಿನ ನೆಲದ ಮೇಲೆ. ಪಕ್ಕದಲ್ಲೊಂದು ವರಸರಿವೆ ಇಟ್ಟುಕೊಂಡು, ಚಾಕ್‌ಪೀಸಿನಿಂದ ವಿಜ್ಞಾನದ ಚಿತ್ರಗಳು, ಗಣಿತದ ಸಮಸ್ಯೆಗಳು ಎಲ್ಲವನ್ನೂ ಹೃದ್ಗತ ಮಾಡಿಕೊಳ್ಳುತ್ತಾ ಇವನು ತನ್ನಷ್ಟಕ್ಕೆ ಮುಸಿನಗುವುದನ್ನು ಕಂಡು ಅಪ್ಪ ಕೇಳಿದ್ದರು.

'ನನ್ನ ಮಾತು ಕೇಳಿದ್ರೆ ನಿಂಗೆ ತಮಾಷಿ ಅನ್ಸುತ್ತಾ? ನಗು ಬರುತ್ತಾ?'

'ವಯಸ್ಸು ಜಾಸ್ತಿಯಾಗುತ್ತಿದ್ದಂತೆ ಅಪ್ಪನಿಗೆ ಫಕ್ಕನೆ ಸಿಟ್ಟು ಬಂದುಬಿಡುತ್ತದೆಯಾ? ಏನೋ...'

'ಮೊದಲು ಮನೆ ನೋಡಿ ಅಪ್ಪಾ. ನೀವು ಮಕ್ಕಳಿಗೆ ಆಸ್ತಿ ಮಾಡಿಟ್ಟ ಹಾಗೆ ನಾನೂ ನನ್ನ ಕೈಲಾದ್ದು ಮಾಡಬೇಡ್ವಾ?' ಇಂದೊಂದು ಕಣ್ಣೊರೆಸುವ ಮಾತು ಎಂದು ಸಂತೋಷನಿಗೆ ಗೊತ್ತಿದೆ.

ಸಪರಿವಾರ ಸಮೇತ ಹೋಗಿ ಮಗ ಖಾಯಿಷ್ ಮಾಡಿದ ಮನೆ ನೋಡಿದಾಗ ಅಪ್ಪ ಅಕ್ಷರಶಃ ಮೂಕವಿಸ್ಮಿತರಾಗಿದ್ದರು. ಅಪಾರ್ಟ್‌ಮೆಂಟಿನ ದೊಡ್ಡ ಗೇಟಿನ ಬಳಿ ಕಾವಲಿಗೆ ನಿಂತಿದ್ದ ಗೂರ್ಖ, ಒಳಹೋಗುವವರ ಜಾತಕ ಪರಿಶೀಲನೆಗೆ ಮೀಸಲಾದ ಬದಿಯ ಸಣ್ಣ ಕೋಣೆ, ಸಂತೋಷ ನೋಡಿದ ಮನೆ ಇದ್ದಿದ್ದು

